## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.–2755/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 22/10/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಪಾಳ್ಯ ಗ್ರಾಮದ ಕೆರೆ ಸರ್ವೆ ನಂ. 444ರಲ್ಲಿ ಒಟ್ಟು 181.77 ಎಕರೆ ಜಮೀನಿನಲ್ಲಿ ಒತ್ತುವರಿ ಮಾಡಿದ್ದು ಸದರಿ ಒತ್ತುವರಿಯನ್ನು ನಿಯಮಾನುಸಾರ ತೆರೆವುಗೊಳಿಸಿ ಕೆರೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು ಸದರಿ ಕೆರೆಯಲ್ಲಿ ಮಳೆ ನೀರು ಸಂಗ್ರಹವಾಗಲು ಅಗತ್ಯ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ರಂಗಸ್ವಾಮಿ ಬಿನ್ ಲೇಟ್ ಪುಟ್ಟರಂಗನಾಯಕ, ಪಾಳ್ಯ ಗ್ರಾಮ ಮತ್ತು ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀಮತಿ ಕಾಮಾಕ್ಷಮ್ಮ, ತಹಶೀಲ್ದಾರ್, ತಾಲ್ಲೂಕು ಕಛೇರಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಹಾಲಿ ನಿವೃತ್ತಿ) (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಪಾಳ್ಯ ಕೆರೆ ಸರ್ವೆ ನಂ. 444ರ ವಿಸ್ತೀರ್ಣ 250 ಎಕರೆ ಕೆರೆ ಒತ್ತುವರಿಯನ್ನು ತೆರವುಗೊಳಿಸದಿರುವ ಬಗ್ಗೆ ದಿನಾಂಕ: 06/04/2017 ರಂದು ತಹಶೀಲ್ದಾರರಿಗೆ ದೂರು ನೀಡಿರುತ್ತಾರೆ. ಕಾರ್ಯಪಾಲಕ ಅಭಿಯಂತರರಿಗೆ ದೂರು ನೀಡಿದ್ದು ಕೆರೆಯ ಒತ್ತುವರಿ ಜಾಗವನ್ನು ತಮ್ಮ ಇಲಾಖೆಯ ಸಹಕಾರದಿಂದ ತೆರವುಗೊಳಿಸಿ ಬೌಂಡರಿ ಗುರುತಿಸಿ ಡ್ರೈವ್ ತೆಗೆದು ಹದ್ದುಬಸ್ತು ಮಾಡಿಕೊಡಿ ಎಂದು ಕಾವೇರಿ ನೀರಾವರಿ ಇಲಾಖೆಯಿಂದ ಪತ್ರ ಬಂದು 6 ತಿಂಗಳು ಕಳೆದಿದ್ದರೂ ಯಾವ ಕ್ರಮವನ್ನು ತೆಗೆದುಕೊಳ್ಳದೇ ಎದುರುದಾರರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ. ಆದ್ದರಿಂದ ಕೆರೆಯ ವಿಸ್ತೀರ್ಣ ಕಡಿಮೆಯಾಗಿ ಮಳೆಗಾಲದಲ್ಲಿ ಪೂರ್ಣ ಪ್ರಮಾಣದ ನೀರು

ಸಂಗ್ರಹವಾಗದೇ ಕೆರೆಯ ಅಚ್ಚುಕಟ್ಟು ಭಾಗದ ರೈತರಿಗೆ ತೊಂದರೆ ಇದ್ದು ಕೂಡಲೇ ದಂಡಾಧಿಕಾರಿ ಮೇಲೆ ಕ್ರಮವಹಿಸಿ ಎಂದು ಕೋರಿರುತ್ತಾರೆ.

ದೂರಿನೊಂದಿಗೆ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ., ಕೊಳ್ಳೇಗಾಲ ಇವರು ಎದುರುದಾರರಿಗೆ ಕೆರೆ ಸರ್ವೆ ಮಾಡಿ ಬೌಂಡರಿ ಗುರುತಿಸಿ ಕೊಡಬೇಕೆಂದು ಕೋರಿ ಬರೆದಿರುವ ಪತ್ರದ ಪ್ರತಿ, ಕೆರೆಯ ಎರಡು ಫೋಟೊಗಳ ಪ್ರತಿಯನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ.

3. ಎದುರುದಾರರ ಆಕ್ಷೇಪಣೆ:–

ಪಾಳ್ಯ ಗ್ರಾಮದ ಪಾಳ್ಯ ಕೆರೆ ಒತ್ತುವರಿ ಕುರಿತು 750 ಎಕರೆ ಪ್ರದೇಶದ ಜಾಗದ ಬಗ್ಗೆ ರಾಜಸ್ವ ನಿರೀಕ್ಷಕರು ಇವರಿಂದ ವರದಿಯನ್ನು ಪಡೆಯಲಾಗಿರುತ್ತದೆ. ಪಾಳ್ಯ ಗ್ರಾಮದ ಸರ್ವೆ ನಂ. 157/ಎ2 ರಲ್ಲಿ 6.06 ಸೆಂಟ್ಸ್ ಜಮೀನನ್ನು ಪಾಳ್ಯ ಗ್ರಾಮದ ರೈತ ಸಂಪರ್ಕ ರಸ್ತೆಯಿಂದ 750 ಎಕರೆ ಪ್ರದೇಶದ ಕೆರೆ ನೀರಾವರಿ ಗದ್ದೆಗೆ ತೆರಳುವ ರಸ್ತೆಯನ್ನು ಏಕಾಏಕಿ ಟ್ರೆಂಚ್ ತೆಗೆದು ಒತ್ತುವರಿ ಮಾಡಿದ್ದು ಆರ್.ಟಿ.ಸಿ. ದಾಖಲೆಯಂತೆ ಹಳ್ಳ ಪರಂಪೋಕು ಜಮೀನಿನ ಒತ್ತುವರಿಯನ್ನು ಸಂಬಂಧಪಟ್ಟ ಗ್ರಾಮಲೆಕ್ಕಿಗರು, ಉಪ ತಹಶೀಲ್ದಾರ್, ರಾಜಸ್ವ ನಿರೀಕ್ಷಕರು ಹಾಗೂ ಭೂಮಾಪಕರ ಜೊತೆಯಲ್ಲಿ ದಿನಾಂಕ: 19/02/2018, 20/02/2018 ಹಾಗೂ 21/02/2018 ರಂದು ಜಮೀನಿನ ಒತ್ತುವರಿ ಪ್ರದೇಶವನ್ನು ಜೆ.ಸಿ.ಬಿ. ಯಂತ್ರದ ಮೂಲಕ ಟ್ರೆಂಚ್ ತೆಗೆಸಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

ತಾಲ್ಲೂಕು ಭೂಮಾಪಕರಿಂದ ವರದಿ ಪಡೆಯಲಾಗಿದ್ದು ಪಾಳ್ಯ ಸರ್ವೆ ನಂ. 157/ಎ2 ರಲ್ಲಿ ಒಟ್ಟು 1.91 ಸೆಂಟ್ಸ್ ವಿಸ್ತೀರ್ಣದಲ್ಲಿ ಆರ್.ಟಿ.ಸಿ. ಯಂತೆ ಹಳ್ಳದ ಪರಂಪೋಕು ಎಂಬುದಾಗಿ ದಾಖಲಾಗಿದ್ದು, ಹಳ್ಳ ಒತ್ತುವರಿ ಮಾಡಿರುತ್ತಾರೆಂದು ಸರ್ವೆ ಸ್ಕೆಚ್ ತಯಾರಿಸಿ ವರದಿ ಸಲ್ಲಿಸಿರುತ್ತಾರೆ. ಪಾಳ್ಯ ಹೋಬಳಿ ಪಾಳ್ಯ ಗ್ರಾಮದ ಸರ್ವೆ ನಂ. 157/ಎ2 ರಲ್ಲಿ 6.06 ಎಕರೆ ಪೈಕಿ 1.91 ಎಕರೆ ಜಮೀನು ಒತ್ತುವರಿಯಾಗಿದ್ದು, ಆರ್.ಟಿ.ಸಿ., ರೀತ್ಯಾ ಹಳ್ಳದ ಪರಂಪೋಕು ಜಮೀನನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಈಗಾಗಲೇ ದಿನಾಂಕ: 19/02/2018, 20/02/2018 ಮತ್ತು 21/02/2018 ರಂದು ಜೆಸಿಬಿ ಯಂತ್ರದ ಮೂಲಕ ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ತೆರವುಗೊಳಿಸಲಾಗಿರುತ್ತದೆ. ಭಾವಚಿತ್ರ, ರಾಜಸ್ವ ನಿರೀಕ್ಷಕರ ವರದಿ, ಗ್ರಾಮಲೆಕ್ಕಿಗರ ವರದಿ ಹಾಗೂ ಭೂಮಾಪಕರು ತಯಾರಿಸಿರುವ ಸರ್ವೆ ಸ್ಕೆಚ್ ಮತ್ತು ಆರ್.ಟಿ.ಸಿ., ದಾಖಲಾತಿಗಳನ್ನು ಸಲ್ಲಿಸಿದೆ ಎಂದು ತಿಳಿಸಿರುತ್ತಾರೆ.

ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಪರಿಶೀಲಿಸಲಾಗಿ ಪಾಳ್ಯ ಗ್ರಾಮದ ಸರ್ವೆ ನಂ. 157/ಎ2 ಜಮೀನಿನಲ್ಲಿದ್ದ ಒತ್ತುವರಿಯನ್ನು ತೆರವುಗೊಳಿಸಿದ ಬಗ್ಗೆ ನಮೂದಿಸಿರುತ್ತಾರೆ. ಪಿರ್ಯಾದುದಾರರು ತಮ್ಮ ದೂರಿನಲ್ಲಿ ಪಾಳ್ಯ ಗ್ರಾಮದ ಸರ್ವೆ ನಂ. 444ರ 250 ಎಕರೆ ಕೆರೆ ಒತ್ತುವರಿಯಾಗಿದ್ದು ಕ್ರಮ ಜರುಗಿಸಿಲ್ಲವೆಂದು ಆರೋಪಿಸಿರುತ್ತಾರೆ.

4. ತಹಶೀಲ್ದಾರರು, ಪಾಳ್ಯ ಗ್ರಾಮದ ಸರ್ವೆ ನಂ. 444ರ ಬಗ್ಗೆ ದಾಖಲೆಗಳ ಸಹಿತ ಸಲ್ಲಿಸಿದ ವರದಿ:

ದಿನಾಂಕ: 12/01/2018 ರಂದು ಕರ್ನಾಟಕ ಭೂಕಬಳಿಕೆ ನಿಷೇಧ ಕಾಯ್ದೆಯ 2011ರ ಸೆಕ್ಷನ್ 9ರ ಅಡಿಯಲ್ಲಿ ಈಗಾಗಲೇ ಸರ್ವೆ ನಂ. 444 ರಲ್ಲಿ ಒಟ್ಟು 181.77 ಎಕರೆ ಜಮೀನು ಆರ್.ಟಿ.ಸಿ. ಪ್ರಕಾರ ಕೆರೆ ಪರಂಪೋಕು ಎಂದು ನಮೂದಾಗಿದ್ದು ಅದರಂತೆ ಒತ್ತುವರಿ ಮಾಡಿಕೊಂಡಿರುವವರ ಬಗ್ಗೆ ಭೂಮಾಪಕರು ತಯಾರಿಸಿದ ನಕ್ಷೆಯಲ್ಲಿ ಕಂಡುಬಂದ ವಿಸ್ತೀರ್ಣದಂತೆ ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿದೆ.

ಸದರಿ ವರದಿಯೊಂದಿಗೆ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ ದೂರಿನ ಪ್ರತಿ, ಸದರಿ ಸರ್ವೆ ಬಗ್ಗೆ ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳ ವರದಿ ಪ್ರತಿ, ಮಹಜರ್ ಪ್ರತಿ, ನಕ್ಷೆ ಪ್ರತಿ, ಆರ್.ಟಿ.ಸಿ. ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ತಹಶೀಲ್ದಾರ್‌ರು ಸಲ್ಲಿಸಿರುವ ಮಾಹಿತಿ ಮತ್ತು ದಾಖಲೆಗಳಿಂದ ಪಾಳ್ಯ ಗ್ರಾಮದ ಸರ್ವೆ ನಂ. 444ರ ಕೆರೆ ಒತ್ತುವರಿ ಮಾಡಿರುವ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರು ಸಲ್ಲಿಸಿರುವ ವರದಿಯಿಂದ ಮತ್ತು ಭೂಕಬಳಿಕೆ ನಿಷೇಧ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಲಾಗಿ ಕೆರೆ ಜಮೀನನ್ನು ಒತ್ತುವರಿ ಮಾಡಿರುವುದು ಹಾಗೂ ಸದರಿ ಒತ್ತುವರಿದಾರರ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ದೂರು ದಾಖಲಿಸಿರುವುದು ಕಂಡುಬಂದಿರುತ್ತದೆ.

5. ತನಿಖೆಯಲ್ಲಿ ಕಂಡುಬಂದ ಅಂಶಗಳು:

(1) ಪಾಳ್ಯ ಕೆರೆ ಸರ್ವೆ ನಂ. 444ರ ವಿಸ್ತೀರ್ಣ 250 ಎಕರೆಯಲ್ಲಿ ಕೆರೆ ಒತ್ತುವರಿ ಮಾಡಿದ್ದು ಒತ್ತುವರಿ ತೆರವುಗೊಳಿಸಬೇಕೆಂದು ಗ್ರಾಮಸ್ಥರು ಎದುರುದಾರರಿಗೆ ದಿನಾಂಕ: 06/04/2017 ರಂದು ದೂರು ನೀಡಿದ್ದು ಕೆರೆ ವಿಸ್ತೀರ್ಣ ಕಡಿಮೆಯಾಗಿ ಮಳೆಗಾಲದಲ್ಲಿ ಪೂರ್ಣ ಪ್ರಮಾಣದ ನೀರು ಸಂಗ್ರಹವಾಗದೆ ಕೆರೆ ಅಚ್ಚುಕಟ್ಟು ಭಾಗದ ರೈತರಿಗೆ

N. Anand

ತೊಂದರೆಯಾಗಿದ್ದು ಕ್ರಮ ಜರುಗಿಸಲು ಕೋರಿದ್ದರೂ ಎದುರುದಾರರು ಕ್ರಮ ಜರುಗಿಸಿಲ್ಲವೆಂದು ಆರೋಪವಿರುತ್ತದೆ.

(2) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ವೆ ನಂ. 444ರ ವಿಚಾರಗಳ ಬಗ್ಗೆ ನಮೂದಿಸದೆ ಸರ್ವೆ ನಂ. 157/ಎ2ರ ಜಮೀನಿಗೆ ಸಂಬಂಧಪಟ್ಟಂತೆ ಮಾಹಿತಿ ಸಲ್ಲಿಸಿದ್ದು ದೂರಿನ ಆಪಾದನೆಗಳ ಬಗ್ಗೆ ಯಾವುದೇ ಉತ್ತರವನ್ನು ನೀಡದೆ ನಿರ್ಲಕ್ಷ್ಯತೆ ತೋರಿರುತ್ತಾರೆ.

(3) ಭೂಮಾಪಕರು ತಯಾರಿಸಿದ ಸರ್ವೆ ನಂ. 444ಕ್ಕೆ ಸಂಬಂಧಪಟ್ಟ ನಕ್ಷೆಯಲ್ಲಿ ಕಂಡುಬಂದ ವಿಸ್ತೀರ್ಣದಂತೆ ಒತ್ತುವರಿದಾರರಾದ ಬೋಳಮಾದನಾಯ್ಕ ರವರ 3 ಜನ ಮಕ್ಕಳ ವಿರುದ್ಧ 1–70 ಸೆಂಟು ಕೆರೆ ಪರಂಪೋಕು ಜಮೀನು ಒತ್ತುವರಿ ಮಾಡಿಕೊಂಡಿದ್ದ ಬಗ್ಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಪ್ರಕರಣವನ್ನು ದಿನಾಂಕ: 12/01/2018 ರಂದು ದಾಖಲಿಸಿದ್ದಾಗಿ ಪ್ರಕರಣ ಪೆಂಡಿಂಗ್ ಇರುವುದಾಗಿ ತಹಶೀಲ್ದಾರರು ತಮ್ಮ ವರದಿಯಲ್ಲಿ ದಾಖಲೆ ಸಹಿತ ಮಾಹಿತಿ ಸಲ್ಲಿಸಿರುತ್ತಾರೆ. ಸದರಿ ದಾಖಲೆಗಳಿಂದ ಕೆರೆ ಪರಂಪೋಕು ಜಮೀನು ಒತ್ತುವರಿ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

(4) ಒತ್ತುವರಿದಾರರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಿ ಒತ್ತುವರಿ ತೆರೆವುಗೊಳಿಸದೆ ಇರುವುದು ಹಾಗೂ ಕೆರೆ ಒತ್ತುವರಿ ತೆರೆವುಗೊಳಿಸಿ ಮಳೆ ನೀರು ಸಂಗ್ರಹಕ್ಕೆ ಕ್ರಮ ಜರುಗಿಸದೆ ಇರುವುದು ಕಂಡುಬಂದಿರುತ್ತದೆ.

6. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಪಾಳ್ಯ ಗ್ರಾಮದ ಕೆರೆ ಸರ್ವೆ ನಂ. 444ರಲ್ಲಿ ಒಟ್ಟು 181.77 ಎಕರೆ ಜಮೀನು ಆರ್.ಟಿ.ಸಿ., ದಾಖಲೆಯಲ್ಲಿ ಕೆರೆ ಪರಂಪೋಕು ಎಂದು ನಮೂದಾಗಿದ್ದು ಸದರಿ ಜಮೀನಿನಲ್ಲಿ ಒತ್ತುವರಿ ಮಾಡಿದ ಬಗ್ಗೆ ತಹಶೀಲ್ದಾರರ ವರದಿಯಿಂದ ಮೇಲ್ನೋಟಕ್ಕೆ ಕಂಡುಬಂದಿದ್ದು ಸದರಿ ಒತ್ತುವರಿಯನ್ನು ನಿಯಮಾನುಸಾರ ತೆರೆವುಗೊಳಿಸಿ ಕೆರೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು ಸದರಿ ಕೆರೆಯಲ್ಲಿ ಮಳೆ ನೀರು ಸಂಗ್ರಹವಾಗಲು ಅಗತ್ಯ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

N. [signature]
22/10

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 22/10

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**